# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

## ಸಿ.ಸಿ. ನಂ. 694/2024

ಚಾ.ಸಾ.1

ಫ್ರಾ.ಸಾ. 3

ಸಾಕ್ಷಿದಾರರ ಹೆಸರು - ಸಾರಿಕಾ ನಾಯ್ಕ

ಗಂಡನ ಹೆಸರು - ಶ್ರೀಧರ ನಾಯ್ಕ

ವಯಸ್ಸು - 50 ವರ್ಷ

ಉದ್ಯೋಗ - ಗೃಹಿಣಿ

ವಾಸ್ತವ್ಯ - ಮುಂಬೈ

(ಇಂದು ದಿನಾಂಕಃ 02-09-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

(ಸಾಕ್ಷಿದಾರರು ಕೊಂಕಣಿ ಭಾಷೆ ಮಾತನಾಡುವವರಾಗಿದ್ದು, ಕನ್ನಡ ಭಾಷೆಗೆ ಭಾಷಾಂತರ ಮಾಡಲು ಶ್ರೀ ವಿ.ಜಿ.ಎ. ವಕೀಲರನ್ನು ನೇಮಿಸಿಕೊಳ್ಳಲಾಯಿತು. )

### ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿನ ಹೇಳಿಕೆ

1 ನೇ ಆರೋಪಿ ನನ್ನ ಗಂಡನ ಅಣ್ಣನ ಮಗ. 2 ನೇ ಆರೋಪಿ ನನ್ನ ಗಂಡನ ಅಣ್ಣನ ಹೆಂಡತಿ. ದಿನಾಂಕ 15-05-2023 ರಂದು ಸಂಜೆ 5.45 ಗಂಟೆಗೆ ನಾನು ಕೆಳಗಿನಮಕ್ಕೇರಿಯಲ್ಲಿ ಇರುವ ನಮ್ಮ ಮನೆಯಲ್ಲಿದ್ದಾಗ ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು ನಮ್ಮ ಜಾಗವನ್ನು ಅವರು ಅತಿಕ್ರಮಣ ಮಾಡಿದ ವಿಷಯದಲ್ಲಿ ಜಗಳ ಮಾಡಿದ್ದರು. ನಾವು ನಮಗೆ ಸಂಬಂಧಪಟ್ಟ ಜಾಗವನ್ನು ಖಾಲಿ ಮಾಡಿಕೊಡಲು ಹೇಳಿದ್ದು ಆಗ 1 ನೇ ಆರೋಪಿ ಜಗಳ ತೆಗೆದು ಕಟ್ಟಿಗೆ ತೆಗೆದುಕೊಂಡು ನನ್ನ ತಲೆಗೆ ಹೊಡೆದಿದ್ದಾರೆ, ಆದ್ದರಿಂದ ನನಗೆ ಪ್ರಜ್ಞೆ ಇರಲಿಲ್ಲ. ಆನಂತರ ಚಾ.ಸಾ.5 ಮತ್ತು ಚಾ.ಸಾ.6 ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. 1 ನೇ ಆರೋಪಿ ನಮ್ಮ ಜಾಗವನ್ನು ಅತಿಕ್ರಮಣ ಮಾಡಿದ್ದೀರಿ ಎಂದು ಬೈದಿರುತ್ತಾರೆ. ನನಗೆ ಆರೋಪಿತರು ನಾಪತ್ತೆ ಮಾಡುತ್ತೇನೆ ಎಂದು ಹೇಳಿದ್ದಾರೆ. ಚಾ.ಸಾ.5 ಮತ್ತು ಚಾ.ಸಾ. 6 ರವರು ಸದರಿ ಗಲಾಟೆಯನ್ನು ಬಿಡಿಸಿದ್ದಾರೆ. ನಾನು ಆಸ್ಪತ್ರೆಯಲ್ಲಿದ್ದಾಗ ಪೊಲೀಸರು ಆಸ್ಪತ್ರೆಗೆ ಬಂದಿದ್ದು ನನ್ನ ದೂರನ್ನು ಪಡೆದುಕೊಂಡಿದ್ದಾರೆ. ದೂರನ್ನು ನನಗೆ ಕನ್ನಡ ಬರೆಯಲು ಬರದ ಕಾರಣ ಅಲ್ಲಿದ್ದವರಿಂದ ನನ್ನ ಪ್ರಥಮ ವರ್ತಮಾನ ಹೇಳಿಕೆ ಬರೆಸಿದ್ದೇನೆ. ಸದರಿ ಪ್ರಥಮ ವರ್ತಮಾನ ಹೇಳಿಕೆಯ ಟ್ರೂ ಕಾಪಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.11 ಎಂದು ಗುರುತಿಸಲಾಯಿತು. ನಾನು ನಿ.ಪಿ.11 ರ ಮೇಲೆ ಹಾಗೆ ಸಹಿ ಹಾಕಿದ್ದೇನೆ.

ದಿನಾಂಕ 17-05-2023 ರಂದು ಪೊಲೀಸರು ಸಂಜೆ 5.30 ಗಂಟೆಗೆ ಸ್ಥಳಕ್ಕೆ ಪಂಚನಾಮೆಗೆ ಬಂದಿದ್ದು ಚಾ.ಸಾ.2 ಮತ್ತು ಚಾ.ಸಾ.3 ರವರ ಸಮಕ್ಷಮ ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿ ಸ್ಥಳದ ನಕ್ಷೆ ತಯಾರಿಸಿದ್ದಾರೆ. ಪೋಟೊ ತೆಗೆದಿರುತ್ತಾರೆ ಹಾಗೂ ನನ್ನ ಸಹಿ ಪಡೆದಿರುತ್ತಾರೆ. ಪಂಚನಾಮೆ ಸಮಯದಲ್ಲಿ ಆರೋಪಿತರು ಹಲ್ಲೆ ಮಾಡುವ ಸಮಯದಲ್ಲಿ ಉಪಯೋಗಿಸಿದ ದೊಣ್ಣೆಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆಯ ಟ್ರೂ ಕಾಪಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.12 ಎಂದು ಗುರುತಿಸಲಾಯಿತು. ನಿ.ಪಿ.12 ರ ಮೇಲಿರುವ ಸಹಿ ಹಾಗೆ ಹಾಕುತ್ತೇನೆ. ನಕ್ಷೆಯ ಟ್ರೂ ಕಾಪಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.13 ಎಂದು ಗುರುತಿಸಲಾಯಿತು. ನಿ.ಪಿ.13 ರ ಮೇಲಿರುವ ಸಹಿ ಹಾಗೆ ಹಾಕುತ್ತೇನೆ. 3 ಭಾವಚಿತ್ರಗಳ ಟ್ರೂ ಕಾಪಿಯನ್ನು ನಿ.ಪಿ.14 ರಿಂದ ನಿ.ಪಿ.16 ಎಂದು ಗುರುತಿಸಲಾಯಿತು. ಘಟನೆಗೆ ಸಂಬಂಧಪಟ್ಟಂತೆ ಚಾ.ಸಾ.5 ರವರು ಮಾಡಿದಂತಹ ವಿಡಿಯೊಾದ ಸಿಡಿಯನ್ನು ಪೊಲೀಸರಿಗೆ ಕೊಟ್ಟಿದ್ದೇನೆ. ಪಂಚನಾಮೆಯ ಮೂಲ ಪ್ರತಿ, ಕಚ್ಚಾ ನಕಾಶೆಯ ಮೂಲ ಪ್ರತಿ ಹಾಗೂ ಭಾವಚಿತ್ರಗಳ ಮೂಲ ಪ್ರತಿ ಸಿಸಿ ನಂ. 1598/2023 ರಲ್ಲಿ ಇರುತ್ತವೆ. ಮುದ್ದೆಮಾಲನ್ನು ನೋಡಿದರೆ ಗುರುತಿಸುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ